ಇನ್ನೊಂದು ದಿವಸ ಹೋಗೋಣವೆಂದರೆ ಹಲಸಿನ ಹಣ್ಣು ಪೂರ್ತಿ ಹಣ್ಣಾಗಿ ತಿನ್ನಲು ಯೋಗ್ಯವಾಗಿರದೇ ಹೋದೀತು ಎಂಬ ಆತಂಕಗಳು ಕಾಡತೊಡಗಿದವು. ಅಷ್ಟರಲ್ಲಿ ದೂರದಲ್ಲಿ ಖಾಸಗಿ ಬಸ್ಸು ಬರುವುದು ಕಾಣಿಸಿ ಅವನಿಗೆ ಸಮಾಧಾನವಾಯಿತು. ಬಸ್ಸೇನೋ ಬಂತು. ಆದರೆ ಇಡೀ ಬಸ್ಸು ಜನರಿಂದ ತುಂಬಿತುಳುಕುತ್ತಿತ್ತು. ಒಳಗೆ ಹತ್ತಲೂ ಸಾಧ್ಯವಾಗಲಿಲ್ಲ. ಬಸ್ಸಿನ ಬಾಗಿಲಿಗೆ ಜನ ಜೋತು ಬಿದ್ದಿದ್ದರು. ಏನು ಮಾಡುವುದೆಂದು ತಿಳಿಯದೆ ಚನ್ನಪ್ಪ ಚಡಪಡಿಸಿದ. ಬಸ್ಸಿಗೆ ಹತ್ತಲು ಪ್ರಯತ್ನಿಸಿದ ಚನ್ನಪ್ಪನನ್ನು ಗಮನಿಸಿದ ಬಸ್ಸಿನ ಕಂಡಕ್ಟರ್ ಸುಮ್ಮನಾಗಲಿಲ್ಲ. ''ಎಲ್ಲಿಗೆ ಹೋಗ್ಬೇಕು ತಾತ...'' ಎಂದು ಕೇಳಿದ. ಯಶವಂತಪುರಕ್ಕೆ ಎಂದು ಉತ್ತರಿಸಿದ ಚನ್ನಪ್ಪನನ್ನು ಕಂಡು ಒಂದು ಸೀಟು ಕಳೆದುಕೊಳ್ಳಲು ಇಚ್ಛಿಸದೇ, ''ಆ ಬ್ಯಾಗು ಕೊಡಿಲ್ಲಿ, ಟಾಪ್ ಮೇಲೆ ಹಾಕಿಸ್ತೀನಿ...'' ಎಂದು ಉತ್ತರಕ್ಕೂ ಕಾಯದೇ ಕಸಿದುಕೊಂಡು ಕ್ಲೀನರನನ್ನು ಕರೆದು ಹಲಸಿನ ಹಣ್ಣಿನ ಬ್ಯಾಗನ್ನು ಟಾಪಿನ ಮೇಲೆ ಹಾಕಿಸಿ ಬಾಗಿಲಿನಲ್ಲಿದ್ದ ಒಂದೆರಡು ಜನರನ್ನು ಕೆಳಗಿಸಿ ಚನ್ನಪ್ಪನನ್ನು ಒಳಗೆ ತಳ್ಳಿದ. ಒಳಗೆ ಹತ್ತುವ ಭರದಲ್ಲಿ ಚನ್ನಪ್ಪನ ಹೆಗಲ ಮೇಲಿದ್ದ ಟವೆಲ್ಲು ಮತ್ತು ಕಾಲಿನಲ್ಲಿದ್ದ ಒಂದು ಚಪ್ಪಲಿ ಬಸ್ಸಿನಿಂದ ಕೆಳಗೆ ಬಿದ್ದುಹೋದವು. ಹಾಕಿಕೊಂಡಿದ್ದ ಬಿಳಿಯ ಶರಟಿನ ತೋಳು ಹರಿದು ಹೋಯಿತು. ಚನ್ನಪ್ಪ ಇವೆಲ್ಲವನ್ನೂ ಗಮನಿಸುವಷ್ಟರಲ್ಲಿ ಬಸ್ಸು ಹೊರಟೇಬಿಟ್ಟಿತು.

ಅತ್ತಿತ್ತ ತಿರುಗಲೂ ಸಾಧ್ಯವಾಗದೇ ಹೇಗೋ ಉಸಿರಾಡುತ್ತಾ ಬೆಂಗಳೂರು ತಲುಪಿ ಯಶವಂತಪುರದಲ್ಲಿ ಮಗನ ಅಪಾರ್ಟ್‌ಮೆಂಟ್ ಬಳಿ ಇಳಿದು ಕ್ಲೀನರ್ ಇಳಿಸಿಕೊಟ್ಟ ಹಲಸಿನ ಹಣ್ಣಿದ್ದ ಬ್ಯಾಗನ್ನು ಹಿಡಿದುಕೊಂಡು ಅಪಾರ್ಟ್‌ಮೆಂಟ್ ಒಳಗೆ ಹೋದ ಚನ್ನಪ್ಪನಿಗೆ ಇನ್ನೊಂದು ಕಂಟಕ ಎದುರಾಯಿತು. ಪ್ರವೇಶದ್ವಾರದಲ್ಲಿ ನಿಂತಿದ್ದ ಸೆಕ್ಯೂರಿಟಿ ಗಾರ್ಡ್ ಚನ್ನಪ್ಪನ ಬಸವಳಿದ ಮುಖ, ಕೆದರಿದ ತಲೆಕೂದಲು, ಹರಿದುಹೋಗಿದ್ದ ಶರಟು ಮತ್ತು ಬರಿಗಾಲು ನೋಡಿ ಒಳಗೆ ಬಿಡಲಿಲ್ಲ. ಶರಟಿನ ಜೇಬಿನಲ್ಲಿದ್ದ ಸಣ್ಣಪುಸ್ತಕ ತೆಗೆದು ಮಗನ ಫ್ಲ್ಯಾಟಿನ ನಂಬರು ಮತ್ತು ಫೋನು ನಂಬರ್ ಎರಡನ್ನೂ ತೋರಿಸಿ ನಾನು ಇವರ ಅಪ್ಪ ಅಂದ. ಆದರೂ ಸೆಕ್ಯೂರಿಟಿ ಗಾರ್ಡ್ ಒಳಗೆ ಬಿಡದೆ ಪುಸ್ತಕದಲ್ಲಿದ್ದ ಫೋನು ನಂಬರಿಗೆ ಫೋನು ಮಾಡಿ ದೃಢಪಡಿಸಿಕೊಂಡು ಇಲ್ಲೇ ಇರಿ ಸಾಬ್ ಬರ್ತಾರಂತೆ ಎಂದ.

ಮನೆಯಲ್ಲಿಯೇ ಇದ್ದ ಚಂದ್ರಕಾಂತ ಪ್ರವೇಶದ್ವಾರಕ್ಕೆ ಕಾರಿನಲ್ಲಿಯೇ ಬಂದು ಅಲ್ಲಿ ನಿಂತಿದ್ದ ಅಪ್ಪನನ್ನು ಕಂಡು ಕಾರಿನ ಬಾಗಿಲು ತೆಗೆದು ಒಳಗೆ ಕೂರಿಸಿಕೊಂಡ.

''ಇದೇನು ನಿನ್ನ ಅವತಾರ... ನೋಡೋಕೆ ಬರ್ತೀನಿ ಅಂತ ಈ ತರಾ ಬರೋದಾ... ನೋಡದೋರು ನನ್ನನ್ನ ಏನು ಅಂದುಕೋಬೇಕು...'' ಎಂದು ಚನ್ನಪ್ಪನ ಮುಖ ನೋಡದೇ ಅಸಮಾಧಾನಗೊಂಡು ನುಡಿದ. ಚನ್ನಪ್ಪ ಏನೂ ಉತ್ತರಿಸಲಿಲ್ಲ. ಮಗನಿಗೆ ನನ್ನ ಪರಿಸ್ಥಿತಿಯ ಅರಿವಿಲ್ಲ, ಕೇಳಿ ತಿಳಿದುಕೊಳ್ಳುವ ವ್ಯವಧಾನವೂ ಇಲ್ಲ, ಅವನದ್ದು ಇದರಲ್ಲಿ ತಪ್ಪಿಲ್ಲ ಎನಿಸಿ ಬೇಸರ ಮಾಡಿಕೊಳ್ಳಲಿಲ್ಲ.

ಚಂದ್ರಕಾಂತನಿಗೆ ಬ್ಯಾಗಿನಲ್ಲಿದ್ದ ಹಲಸಿನ ಹಣ್ಣಿನ ವಾಸನೆ ಮೂಗಿಗೆ ಬಡಿದು ಬ್ಯಾಗಿನತ್ತ ಒಮ್ಮೆ ದೃಷ್ಟಿ ಹರಿಸಿ, ''ಇದು ಬೇರೆ ಯಾಕೆ ಹೊತ್ಕೊಂಡು ಬರೋಕೆ ಹೋದೆ... ಮೂರು ರೂಪಾಯಿ ಹಣ್ಣಿಗೆ ನೂರು ರೂಪಾಯಿ ಖರ್ಚು... ನೀನು ಮಾಡೋದೆಲ್ಲಾ ಇಂತಾದ್ದೇ...'' ಎಂದು ಸಿಡಿಮಿಡಿಗೊಂಡಾಗ ಮಾತ್ರ ಚನ್ನಪ್ಪನಿಗೆ ದುಃಖ ತಾಳಲಾಗದೆ ಕಣ್ಣುಗಳು ಹನಿದುಂಬಿದವು. ಒರೆಸಿಕೊಳ್ಳಲು ಹೆಗಲ ಮೇಲೆ ಟವೆಲ್ಲು ಕೂಡ ಇರಲಿಲ್ಲ.

ಲಿಫ್ಟಿನಲ್ಲಿ ಹೋಗಿ ಮಗನ ಫ್ಲ್ಯಾಟಿನ ಒಳಗೆ ಕಾಲಿಟ್ಟಾಗ ಸೊಸೆ ಮನೆಯಲ್ಲಿರುವಂತೆ ಕಾಣಲಿಲ್ಲ.